ಶ್ರೀ ಸಿದ್ದರಾಮಯ್ಯ.—ಮಾನ್ಯ ಅಧ್ಯಕ್ಷರೇ, ಜಿಲ್ಲಾಪರಿಷತ್ತು ಹಾಗೂ ಮಂಡಲ ಪಂಚಾಯತಿಗೆ ಕಾನೂನನ್ನು ಮಾಡುವಾಗ ಮಾನ್ಯ ಶಿವನಂಜಪ್ಪನವರೂ ಕೂಡ ಇದ್ದಾರೆ. ೧೮೨೯ನೇ ವಿಧಿಯಲ್ಲಿ ಹೊಸ ಪಶುವೈದ್ಯ ಶಾಲೆಗಳನ್ನು ತೆರೆಯತಕ್ಕಂತಹ ಅಧಿಕಾರವನ್ನು ಜಿಲ್ಲಾ ಪರಿಷತ್ತಿಗೆ ಕೊಟ್ಟಿದೆ. ಅಧಿಕಾರ ವಿಕೇಂದ್ರೀಕರಣ ಮಾಡುವಾಗ ಮತ್ತು ಹೊಸ ಯೋಜನೆಗಳನ್ನು ರೂಪಿಸುವಾಗ ಎಲ್ಲೆಲ್ಲಿ ಆಗತ್ಯವಿದೆ, ಆದ್ಯತೆ ಇದೆ ಎಂಬುದನ್ನು ನೋಡಿ ಇದನ್ನು ಮಾಡಿದ್ದೇವೆ, ಪಶುವೈದ್ಯ ಶಾಲೆಗಳನ್ನು ತೆರೆಯತಕ್ಕಂಥಾದ್ದನ್ನು ಬಿಟ್ಟು ಉಳಿದ ಕೆಲಸಗಳನ್ನು ನಾವು ಮಾಡುತ್ತೇವೆ.

ಶ್ರೀ ಜಿ ಎಸ್. ಶಿವನಂಜಪ್ಪ.—ನಿಮ್ಮನ್ನು ಯಾವುದು ಕೊಡಿ ಎಂದು ಕೇಳುವುದು, ಯಾವುದನ್ನು ಬಿಡುವುದು, ನಾವು ನಿಮ್ಮನ್ನು ಕೇಳಬೇಕಾಗಿರುವುದು ಯಾವುದು ಅದನ್ನಾದರೂ ತಿಳಿಸಿ? ಇದು ಇಡೀ ಸದನದ ಪ್ರಶ್ನೆ. ನಿಮ್ಮ ಇಲಾಖೆಯ ಬಗ್ಗೆ ನಾವು ನಿಮ್ಮನ್ನು ಏನೇನು ಕೇಳುವುದಕ್ಕೆ ಅಧಿಕಾರವಿದೆ ನೀವು ಏನೇನು ಕೊಡುವುದಕ್ಕೆ ಅಧಿಕಾರವಿದೆ ಎಂಬುದನ್ನು ತಿಳಿಸಿ. ನಾವು ಅಷ್ಟು ಮಾತ್ರ ಕೇಳುತ್ತೇವೆ. ಕೇಳಬೇಕಾದರೆ ಆಕಾಶದಿಂದ ಭೂಮಿಯು ತನಕ ಇದೆ.

ಶ್ರೀ ಸಿದ್ದರಾಮಯ್ಯ.—ಅಧಿಕಾರ ವಿಕೇಂದ್ರೀಕರಣ ಮಾಡತಕ್ಕಂತಹ ಸಂದರ್ಭದಲ್ಲಿ ಹೊಸ ಪಶುವೈದ್ಯಶಾಲೆಗಳನ್ನು ತೆರೆಯತಕ್ಕಂತಹ ಅಧಿಕಾರವನ್ನು ಜಿಲ್ಲಾ ಪರಿಷತ್ತಿಗೆ ವರ್ಗಾವಣೆ ಮಾಡಿದ್ದೇವೆ ಅದನ್ನು ಬಿಟ್ಟು ಉಳಿದ ಎಲ್ಲಾ ಅಧಿಕಾರಗಳು ರಾಜ್ಯ ಮಟ್ಟದ ಉಸ್ತುವಾರಿಯಲ್ಲಿ ನೋಡಿಕೊಳ್ಳುತ್ತೇವೆ. ನಿಮಗೆ ಏನು ಬೇಕು ಎಂದು ಕೇಳಿದರೆ ಹೇಳುತ್ತೇನೆ. ಉಳಿದ ಎಲ್ಲಾ ಅಧಿಕಾರ ನಮಗೆ ಇರುತ್ತದೆ.

ಶ್ರೀ ಜಿ ಎಸ್. ಶಿವನಂಜಪ್ಪ.—ಇದು ಇಡೀ ಸದನದ ಪ್ರಶ್ನೆ. ಇವರಂ ದುಡ್ಡು ಕೊಟ್ಟರೆ ತಾನೇ ಆವರು ಮಂಜೂರು ಮಾಡುವುದು. ಆಸ್ಪತ್ರೆಗಳಿಂದ ಜಿಲ್ಲಾ ಪರಿಷತ್ತಿಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ ಎಂಬುದನ್ನು ತಿಳಿಸಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ.—ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಜಿಲ್ಲಾ ಪರಿಷತ್ ಕಾಯಿದೆಯನ್ನು ಈ ಸದನದಲ್ಲಿ ಅಂಗೀಕಾರ ಮಾಡಿದ್ದೇವೆ. ಇದು ಅಸ್ತಿತ್ವಕ್ಕೆ ಬಂದು ಒಂದು ವರ್ಷ ಕಳೆದುಹೋಗಿದೆ. ಜಿಲ್ಲಾ ಪರಿಷತ್ತಿನ ಸದಸ್ಯರಿಗೆ ಏನೇನು ಅಧಿಕಾರ ಇದೆ, ಶಾಸಕರಿಗೆ ಏನೇನು ಅಧಿಕಾರವಿದೆ ಎಂಬುದು ಮಾನ್ಯ ಸದಸ್ಯರಾದ ಶಿವನಂಜಪ್ಪನವರಿಗೆ ಗೊತ್ತಿಲ್ಲವೇ?

ಶ್ರೀ ಜಿ.ಎಸ್. ಶಿವನಂಜಪ್ಪ.—ಗೊತ್ತಿಲ್ಲವೆಂದು ಕೇಳುತ್ತಿದ್ದೇನೆ. ಗೊತ್ತಿದ್ದರೆ ಕೇಳುತ್ತಿರಲಿಲ್ಲ, ಮಾನ್ಯ ಸಿದ್ದರಾಮಯ್ಯನವರನ್ನು ಕೇಳಿದರೆ ಅಲ್ಲಿ ತೋರಿಸುತ್ತಾರೆ.

ಅಧ್ಯಕ್ಷರು.—ಮಾನ್ಯ ಕೃಷ್ಣಪ್ಪನವರ ಪ್ರಶ್ನೆ ೪೬೨ ಕಾರ್ಮಿಕ ಇಲಾಖೆಗೆ ಹೋಗಿದೆ, ಕಾರ್ಮಿಕ ಇಲಾಖೆಯವರು ಉತ್ತರ ಕೊಡುತ್ತಾರೆ.

ರಾಜ್ಯದಲ್ಲಿರುವ ಕಾರ್ಖಾನೆಗಳಿಗೆ ವಿದ್ಯುಚ್ಛಕ್ತಿ ಒದಗಿಸುವ ಬಗ್ಗೆ.

೪೮. ಶ್ರೀ ಗೋಪಾಲ ಮಯ್ಯಕಂದ ಕಾನಡೆ (ಸಿರ್ಸಿ).—ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಕೈಗಾರಿಕೆಗಳ ಸಂಖ್ಯೆ ಎಷ್ಟು?

ಆ) ಈ ಎಲ್ಲಾ ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿ ಸರಬರಾಜಾಗುತ್ತಿರುವುದು ನಿಜವೆ?

ಇ) ಹಾಗಿದ್ದಲ್ಲಿ ಯಾವ ಯಾವ ಕಾರ್ಖಾನೆಗಳಿಗೆ ಯಾವ ಯಾವ ದರದಲ್ಲಿ ವಿದ್ಯುಚ್ಛಕ್ತಿ ಒದಗಿಸಲಾಗುತ್ತಿದೆ.

ಈ) ಈ ಕೈಗಾರಿಕೆಗಳಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ ಹಣ ಎಷ್ಟು?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ೧೨,೩೫೦

ಆ) ಪೌದು.

ಇ) ವಿದ್ಯುಚ್ಛಕ್ತಿ ದರವನ್ನು ಅನುಬಂಧದಲ್ಲಿ ಕೊಡಲಾಗಿದೆ.

ಈ) ಕಾರ್ಖಾನೆಗಳಿಂದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಬರಬೇಕಾದ ಒಟ್ಟು ಬಾಕಿ ಹಣ ೧೪೭.೮೫ ಕೋಟಿ ರೂಪಾಯಿಗಳು.

ANNEXURE

In the State, the Industries have been categorised as small and big Industries. Small Industries are further divided into Tiny Industries and Small Industries:

Tariff applicable to these are indicated below:

(1)	Mini Industries :	
	Fixed charges	Rs. 6/-per H.P. per month
	Electricity Charges	65 paise per unit consumed
(2)	Small Industries :	
	Fixed charges	Rs. 6/-per H.P. per month
	Electricity charges	90 paise per unit consumed.
(3)	Big Industries :	
	Demand charges	Rs. 40 per KVA per month
	Consumption charges	80 paise per unit consumed.

ಶ್ರೀ ಜೆ. ಹೆಚ್. ಪಟೇಲ್.—ಇದು ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲದೇ ಇರುವಂತಹ ಪ್ರಶ್ನೆ ಎಂದು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ. ಉತ್ತರ ಕೊಡುತ್ತೇನೆ ನನಗೆ ಎರಡು ನಿಮಿಷ ಅವಕಾಶ ಕೊಡಿ. ರಾಜ್ಯದಲ್ಲಿರುವ ಕಾರ್ಖಾನೆಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಾರೆ ಉತ್ತರ ಸಾವಿರಾರು. ೨) ಈ ಎಲ್ಲಾ ಕಾರ್ಖಾನೆಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಆಗುತ್ತಿರುವುದು ನಿಜವೇ? ಬಾಕಿ ಕೊಟ್ಟಿದ್ದಲ್ಲಿ ಆಗುತ್ತಿರಬಹುದು. ೩) ಹಾಗಿದ್ದಲ್ಲಿ ಯಾವ್ಯಾವ ಕಾರ್ಖಾನೆಗಳಿಗೆ ಯಾವ ಯಾವ ದರದಲ್ಲಿ ವಿದ್ಯುಚ್ಛಕ್ತಿ ಒದಗಿಸಲಾಗುತ್ತಿದೆ? ಆಯಾಯ ಕಾರ್ಖಾನೆಗಳು ಕೊಡುವ ಶಕ್ತಿಯಂ ರೂಪದಲ್ಲಿ ಪ್ರಶ್ನೆ ೪) ಕಾರ್ಖಾನೆಗಳಿಂದ ಸರಕಾರಕ್ಕೆ ಬರಬೇಕಾಗಿರುವ ಬಾಕಿ ಹಣವೆಷ್ಟು—ಲಕ್ಷಾಂತರ ರೂಪಾಯಿಂಗಳು.

ಶ್ರೀ ಗೋಪಾಲ ಪಂಕುಂದ ಕಾನಡೆ.—೧೯೮೭ರಲ್ಲಿ ನಾನು ಒಂದು ಪ್ರಶ್ನೆ ಕೇಳಿದ್ದೆ ಅದಕ್ಕೆ ಇವರೇ ಉತ್ತರ ಕೊಟ್ಟಿದ್ದಾರೆ. ಹತ್ತು ಲಕ್ಷಕ್ಕಿಂತ ಮೇಲ್ಪಟ್ಟಿರುವ ಕಾರ್ಖಾನೆಗಳ ಲಿಸ್ಟ್‌ಅನ್ನು ಮಾತ್ರ ಕೊಟ್ಟಿದ್ದಾರೆ ಮತ್ತು ಅದಕ್ಕಿಂತ ಕೆಳಗಡೆ ಬರುವ ಲಿಸ್ಟ್ ಅನ್ನು ಕಳಂಹಿಸುವುದಿಲ್ಲವೆಂದು ಹೇಳಿದ್ದಾರೆ. ಒಟ್ಟು ಹತ್ತು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ ಇನ್ನು ೧೪೭ ಕೋಟಿ ೪೨ ಲಕ್ಷ ಬಾಕಿ ಇದೆ ಇದು ಸಣ್ಣ ಬಾಬತ್ತೇ? ಹತ್ತು ಲಕ್ಷ ರೂಪಾಯಿಗಳಿಗಿಂತ ಕೆಳಗಡೆ ಬರುವ ಕಾರ್ಖಾನೆಯ ಬಗ್ಗೆ ವಿವರವನ್ನು ಕೊಡಿ. ಇದು ಸರಿಯಿಲ್ಲವೆಂದು ಹೇಳಿದರೆ ಹೇಗೆ?

೧೨-೦೦ ಮಧ್ಯಾಹ್ನ

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ. ಶಾಸಕರು ಕೊಟ್ಟ ಪ್ರಶ್ನೆಯೇ ಸರಿ ಇಲ್ಲ ಎಂದು ಹೇಳಿದರೆ ಹೇಗೆ?

ಅಧ್ಯಕ್ಷರು.—ಮಾನ್ಯ ಕಾನಡೆಯವರೇ, ನಿಮ್ಮ ಪ್ರಶ್ನೆಯನ್ನು ನೀವು ಸಮಾಧಾನವಾಗಿ ಕೇಳಿ.

ಶ್ರೀ ಗೋಪಾಲ ವಂಕಂಂದ ಕಾನಡೆ.—ನನ್ನ ಪ್ರಶ್ನೆಯೇ ಸರಿ ಇಲ್ಲ ಎಂದು ಅವರು ಹೇಗೆ ಹೇಳಿದರು?

(ಗೊಂದಲ)

ಶ್ರೀ ಜೆ. ಹೆಚ್. ಪಟೇಲ್.—ಆ ಪ್ರಶ್ನೆಗೆ ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಕೇಳುವುದೇನೆಂದರೆ ಹತ್ತು ಲಕ್ಷಕ್ಕಿಂತ ಮೇಲೆ ಇರತಕ್ಕಂಥ ಫ್ಯಾಕ್ಟರಿಗಳ ಬಗ್ಗೆ ಪಟ್ಟಿಯನ್ನು ನೀವು ಕೊಟ್ಟಿದ್ದೀರಿ, ಬಾಕಿ ಉದರ ಒಳಗೆ ಯಾವುದು ಯಾವುದೂ ಇದೆ, ಆ ಪಟ್ಟಿಯನ್ನು ಕೊಡಿ ಎಂದು ಕೇಳಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್.—ಕ್ಯಾಟಗರಿವೈಸ್ ಕೇಳಿದರೆ ನಾನು ಹೇಗೆ ಉತ್ತರವನ್ನು ರೆಪ್ಲೈಸ್ ಮಾಡಲಿ. ಅವರು ಕೇಳಿರುವುದು ರಾಜ್ಯದಲ್ಲಿರುವ ಕಾರ್ಖಾನೆಗಳ ಸಂಖ್ಯೆ ಎಷ್ಟು? ಅದಕ್ಕೆ ಉತ್ತರ ಸಾವಿರಾರು. ವಂಂದಿನ ಪ್ರಶ್ನೆ ಕಾರ್ಖಾನೆಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾಗುತ್ತಿದೆಯೇ ಎಂಬುದಕ್ಕೆ ಬರಬೇಕಾಗಿರುವ ಬಾಕಿಯನ್ನು ಕಟ್ಟಿದ್ದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಲಾಗುತ್ತಿದೆ. ಹಾಗಿದ್ದಲ್ಲಿ ಯಾವ್ಯಾವ ಕಾರ್ಖಾನೆಗೆ ಯಾವ್ಯಾವ ದರದಲ್ಲಿ ವಿದ್ಯುಚ್ಛಕ್ತಿ ಒದಗಿಸಲಾಗಂತ್ತಿದೆ ಎಂಬುದಕ್ಕೆ ಇದರಲ್ಲಿ ಹೈಕಾಸ್ಟ್ ಪವರ್ ಕೇಳುವವರು ಇದ್ದಾರೆ ಯಾವುದೋ ಒಂದು ಕ್ಯಾಟಗರಿ ಹೇಳಿದರೆ ಯಾರ್ಯಾರಿಗೆ ಹೈಕಾಸ್ಟ್ ಪವರ್ ಕೊಟ್ಟಿದೆಯೋ? it will take not less than six months to collect this information. ಯಾರು ಇದಕ್ಕೆ ಉತ್ತರ ಕೊಡುತ್ತಾರೆ. ಯಾವ ಕಾರ್ಖಾನೆಗಳು ಎಂದರೆ ಸರ್ಕಾರ ವಲಯದವುಗಳೇ, ಖಾಸಗಿ ವಲಯದವುಗಳೇ, ಜಂಟಿ ವಲಯದವುಗಳೇ ಅದನ್ನು ಹೇಳಬೇಕಾಗುತ್ತದೆ. ವಂಂದಿನ ಪ್ರಶ್ನೆ ಕಾರ್ಖಾನೆಗಳಿಂದ ಸರ್ಕಾರಕ್ಕೆ ಬರಬೇಕಾಗಿರುವುದರಿಂದ ಬಾಕಿ ಹಣವೆಷ್ಟು? ಇದಕ್ಕೆ ಉತ್ತರ ಲಕ್ಷಾಂತರ ರೂಪಾಯಿಂಗಳಷ್ಟು ಬಾಕಿ ಇದೆ. ಇದನ್ನೇ ಸ್ಪೆಸಿಫಿಕ್ ಆಗಿ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಪ್ರಶ್ನೆ ರಾಜ್ಯದಲ್ಲಿರುವ ಕಾರ್ಖಾನೆಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಾರೆ, ಇದಕ್ಕೆ ಉತ್ತರವಾಗಿ ಸಚಿವರು ಸಾವಿರಾರು ಎಂದು ಹೇಳಿದರು. ಇವತ್ತು ಕಾರ್ಖಾನೆಗಳು ಎಷ್ಟಿರಬಹುದು ಎನ್ನುತಕ್ಕಂಥ ಅಭಿಪ್ರಾಯವನ್ನು ಅಂದಾಜಿನ ಪ್ರಕಾರವಾಗಿ ನಾವು ಕೇಳಿದ್ದರೆ ಸಾವಿರಾರು ಎಂದು ಹೇಳಬಹುದು. ಖಾಸಗೀ ವಲಯ, ಸರ್ಕಾರೀ ವಲಯ ಈ ಎರಡರಲ್ಲಿಯೂ ಕೂಡಾ ಎಷ್ಟು ಕಾರ್ಖಾನೆಗಳು ಇದೆ ಎಂದು ಕೈಗಾರಿಕಾ ಇಲಾಖೆಯ ಪಟ್ಟಿಯಲ್ಲಿ ಸಿಗುತ್ತದೆ.

ಶ್ರೀ ಜೆ. ಹೆಚ್. ಪಟೇಲ್.—ಖಾಸಗೀ ಎಷ್ಟು ಇದೆ ಎಂದೂ ಗೊತ್ತಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಖಾಸಗೀಗಳದು ಏತಕ್ಕೆ ಆಗುವುದಿಲ್ಲ?

ಶ್ರೀ ಜೆ. ಹೆಚ್. ಪಟೇಲ್.—ಕೆಲವಕ್ಕೆ ರಿಜಿಸ್ಟ್ರೇಷನ್ ಬೇಕಾಗುತ್ತದೆ. ಕೆಲವಕ್ಕೆ ರಿಜಿಸ್ಟ್ರೇಷನ್ ಬೇಕಾಗುವುದಿಲ್ಲ. ಕಾರ್ಖಾನೆ ಎಂದರೆ ಒಂದು ಸೋಡಾ ಫ್ಯಾಕ್ಟರಿ ಕೂಡಾ ಆಗಬಹುದು, ಸ್ಟೀಲ್ ಮಿಲ್ ಆಗಬಹುದು, ಸೈಕಲ್‌ಷಾಪ್ ಆಗಬಹುದು, ಈಗಿನ ಡೆಫಿನಿಷನ್ ಪ್ರಕಾರ ಕೆಲವಕ್ಕೆ ಸರ್ಕಾರದಲ್ಲಿ ದಾಖಲೆ ಇರುತ್ತದೆ, ದಾಖಲೆ ಸಿಗುವಂಥ ಕ್ಯಾಟಗರಿ ಕೇಳಿದರೆ ನಾನು ಹೇಳಬಲ್ಲೆ. ಸರ್ಕಾರದ ದಾಖಲೆಯಲ್ಲಿ ಸಿಗತಕ್ಕಂಥ ಕ್ಯಾಟಗರಿ ಬಗ್ಗೆ ಕೇಳಿದರೆ ನಾನು ಉತ್ತರವನ್ನು ಹೇಳಬಲ್ಲೆ.

ಶ್ರೀ ಎಸ್. ಬಂಗಾರಪ್ಪ.—ಆಯಿತು. ಅದನ್ನೇ ಹೇಳಿ. ಈಗ ಉಪ ಪ್ರಶ್ನೆಯನ್ನು ಕೇಳುತ್ತೇನೆ. ದಾಖಲೆಯಲ್ಲಿರತಕ್ಕಂಥ ಕಾರ್ಖಾನೆಗಳು.....

ಶ್ರೀ ಜೆ. ಹೆಚ್. ಪಟೇಲ್.—ಪ್ರಶ್ನೆಯನ್ನು ಬೇರೆ ರೀತಿ ಕೇಳಿದರೆ ನಾನು ಉತ್ತರವನ್ನು ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ದಾಖಲೆಯಲ್ಲಿರತಕ್ಕಂಥ ಕಾರ್ಖಾನೆಯ ಪಟ್ಟಿಯನ್ನು ಕೊಡಬಲ್ಲಿ ಎಂದು ಹೇಳುತ್ತೀರಿ. ದಯಮಾಡಿ ಅದನ್ನೇ ಸದನಕ್ಕೆ ಕೊಡಿ.

ಶ್ರೀ ಜೆ. ಹೆಚ್. ಪಟೇಲ್. —ನೀವು ಕೇಳಿರುವ ಪ್ರಶ್ನೆ ಅದಲ್ಲ.

ಶ್ರೀ ಎಸ್. ಬಂಗಾರಪ್ಪ.—ದಾಖಲೆಯಲ್ಲಿರತಕ್ಕಂಥ ಕಾರ್ಖಾನೆಗಳು ನಿಮ್ಮ ಹತ್ತಿರ ಎಷ್ಟಿದ್ದಾವೋ ಅಷ್ಟನ್ನು ಹೇಳಿ ಮುಂದಿನದನ್ನು ಅನಂತರ ಒದಗಿಸಿಕೊಡುತ್ತೇನೆ ಎಂದು ಹೇಳಬಹುದಾಗಿತ್ತು.

ಶ್ರೀ ಜೆ. ಹೆಚ್. ಪಟೇಲ್. —ಅದಕ್ಕೆ ಸಮರ್ಪಕವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಸಾವಿರಾರು ಎಂದೂ ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಎಷ್ಟು ಎಂದು ಹೇಳಿದರೆ ಸಾವಿರಾರು, ಲಕ್ಷೋಪಲಕ್ಷ ಎಂದು ಉತ್ತರ ಕೊಡುವುದು ಸರಿಯಲ್ಲ. ಅದರ ಅರ್ಥ ಅಂಕಿಅಂಶಗಳನ್ನು ಹೇಳಬೇಕಾಗುತ್ತದೆ.

ಶ್ರೀ ಜೆ. ಹೆಚ್. ಪಟೇಲ್.—ಮತ್ತೆ ಸ್ಪೆಸಿಫಿಕ್ ಆಗಿ ರೂಲ್ಸನ್ನು ಓದುವ ಅಗತ್ಯ ಇಲ್ಲ. ಪ್ರಶ್ನೆಯನ್ನು ಸರಿಯಾಗಿ ಅವರು ಕೇಳಲಿ, ನಾನು ಉತ್ತರವನ್ನು ಕೊಡುತ್ತೇನೆ.

ಅಧ್ಯಕ್ಷರು.—ಮುಂದಿನ ಪ್ರಶ್ನೆ. ಶ್ರೀ ಚಿಕ್ಕಬೋರಯ್ಯನವರದು. ಅದನ್ನು ಕಳಂಹಿಸಿಕೊಡಿ. ನಾನು ಉತ್ತರವನ್ನು ಕೊಡಿಸುತ್ತೇನೆ. ಮಾನ್ಯ ಸಚಿವರು ಉತ್ತರವನ್ನು ಕೊಡುತ್ತೇನೆ ಎಂದು ಹೇಳಿದ್ದಾರೆ, ಉತ್ತರವನ್ನು ಕೊಡುತ್ತಾರೆ.

ಶ್ರೀ ಗೋಪಾಲ ಮುಕಂದ ಕಾನಡೆ.—ಹೋದ ವರ್ಷದಿಂದಲೂ ಕೇಳುತ್ತಿದ್ದೇನೆ. ಉತ್ತರವನ್ನು ಕೊಟ್ಟಿಲ್ಲ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ಅದನ್ನು ಕಳುಹಿಸಿಕೊಡಿ, ಉತ್ತರವನ್ನು ಕೊಡಿಸುತ್ತೇನೆ,

(ಗೊಂದಲ)

ಶ್ರೀ ಜೆ. ಹೆಚ್. ಪಟೇಲ್.—ಬಾಕಿ ಕಟ್ಟದೇ ಇರುವ ಇಂಡಸ್ಟ್ರೀಗಳಂ ಎಷ್ಟು ಇದೆ ಎಂದರೆ ಬಂಗಾರಪ್ಪನವರೆ ನಿಮಂಗೆ ಗೊತ್ತೇ ಇದೆ. ಸ್ಮಾಲ್, ಮಿಡಿಯಂ, ಅಂಡ್ ಲಾರ್ಜ್ ಸ್ಕೇಲ್ ಇಂಡಸ್ಟ್ರೀಸ್ Factory is a general and vague term. ಅದಕ್ಕೆ ಏನಾದರೂ ಪವರ್ ಎಷ್ಟಿರುತ್ತದೋ, ಅದನ್ನು ನೋಡಿ ಹೇಳಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಹಾಗಿದ್ದಲ್ಲಿ ಯಾವ್ಯಾವ ಕಾರ್ಖಾನೆಗೆ ಯಾವ್ಯಾವ ದರದಲ್ಲಿ ವಿದ್ಯುಚ್ಛಕ್ತಿ ಒದಗಿಸಲಾಗುತ್ತಿದೆ ಮಂತ್ರಿ ಕಾರ್ಖಾನೆಗಳಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ ಹಣವೆಷ್ಟು ಎಂದು ಕೇಳಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್,—ಲಕ್ಷಾಂತರ ರೂಪಾಯಿಗಳು ಎಂದು ನಾನು ಹೇಳಿದ್ದೇನಲ್ಲ.

ಶ್ರೀ ಎಸ್. ಬಂಗಾರಪ್ಪ.—ಹಾಗೆ ಹೇಳಿದರೆ ಬಹಳ ಕಷ್ಟವಾಗುತ್ತದೆ. ಎಷ್ಟು ಹಣ ಬಾಕಿ ಇದೆ ಎಂದು ಕೇಳಿದಾಗ ಲಕ್ಷಾಂತರ ಎಂದು ಹೇಳುವುದು ಸರಿಯಾದ ಉತ್ತರವಲ್ಲ. ನಿಗದಿಯಾಗಿ ಎಷ್ಟು ಹಣ ಬರಬೇಕಾಗಿದೆ ಎಂಬುದನ್ನು ತಿಳಿಬೇಕು.

ಶ್ರೀ ಜೆ. ಹೆಚ್. ಪಟೇಲ್,—ಯಾವ ತರಹದ ಕಾರ್ಖಾನೆಗಳಿಂದ ಬರಬೇಕಾಗಿದೆ, ಎಂದು ಕೇಳಿದರೆ ಹೇಳಬಹುದೇ ಹೊರತು.....

ಅಧ್ಯಕ್ಷರು.—ಮತ್ತೊಂದು ಪ್ರಶ್ನೆಯನ್ನು ಸ್ಪೆಸಿಫಿಕ್ ಆಗಿ ಕಳುಹಿಸಿಕೊಡಿ.

ಶ್ರೀ ಎಸ್. ಬಂಗಾರಪ್ಪ.—ಈ ಪ್ರಶ್ನೆ ಏನಾಗಿದೆ ಎಂದು ಅರ್ಥವಾಗುತ್ತಿಲ್ಲ.

ಅಧ್ಯಕ್ಷರು.—ಅವರು ಉತ್ತರಿಸುತ್ತೇನೆಂದು ಹೇಳುತ್ತಾರೆ, ಸ್ಪೆಸಿಫಿಕ್ ಆಗಿ ಪ್ರಶ್ನೆಯನ್ನು ಕಳುಹಿಸಿ.

ಶ್ರೀ ಎಸ್. ಬಂಗಾರಪ್ಪ.—ಕಾರ್ಖಾನೆಗಳು ಎಷ್ಟಿವೆ ಎಂದರೆ ಸಾವಿರಾರು, ಎಷ್ಟು ಹಣ ಬಾಕಿ ಬರಬೇಕಾಗಿದೆ ಎಂದರೆ ಲಕ್ಷಾಂತರ ರೂಪಾಯಿ ಎಂದು ಹೇಳಿದರೆ ಇದು ಉತ್ತರವೆ? ಪಬ್ಲಿಕ್ ಸೆಕ್ಟಾರ್‌ನಿಂದ ಎಷ್ಟು ಬರಬೇಕಾಗಿದೆ, ಪ್ರೈವೇಟ್ ಸೆಕ್ಟಾರ್‌ನಿಂದ ಎಷ್ಟು ಬರಬೇಕಾಗಿದೆ ಎಂದು ನೀವೇ ಹೇಳಬಹುದಿತ್ತಲ್ಲ. ಅದರಲ್ಲಿ ತಪ್ಪೇನಿದೆ?

ಶ್ರೀ ಜೆ. ಹೆಚ್. ಪಟೇಲ್.—ಅದಕ್ಕೆ ಕೇಳುತ್ತಿರುವುದು ನಿವಂಗೆ ಯಾವ ಫ್ಯಾಕ್ಟರಿಗಳ ಬಗ್ಗೆ ಬೇಕು ಎಂದು.

ಶ್ರೀ ಎಸ್. ಬಂಗಾರಪ್ಪ.—ಸಾವಿರಾರು, ಲಕ್ಷಾಂತರ ಎಂದರೆ ಇದು ಉತ್ತರವೇ ಎಂಬುದನ್ನು ನೀವೇ ಯೋಚಿಸಿ.

ಶ್ರೀ ಜೆ. ಹೆಚ್. ಪಟೇಲ್.—ಆ ತರಹ ಪ್ರಶ್ನೆ ಕೇಳಿದರೆ ಹಾಗೆಯೇ ಹೇಳಬೇಕಾಗುತ್ತದೆ. ಬೇರೆ ಮಾರ್ಗವೇ ಇಲ್ಲ. ಆದ್ದರಿಂದ ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಿ, ಇನ್ನೊಂದು ರೂಪದಲ್ಲಿ ಅವರು ಕೇಳಲಿ.

ಅಧ್ಯಕ್ಷರು.—ಪ್ರಶ್ನೆಯನ್ನು ಮುಂದಕ್ಕೆ ಹಾಕಿ ಉತ್ತರ ಕೊಡಿಸುತ್ತೇನೆ.

ಶ್ರೀ ಗೋಪಾಲ ಮಂಕುಂದ ಕಾನಡೆ.—ಆರ್ಧ ಗಂಟೆ ಚರ್ಚೆಗೆ ನನಗೆ ಈ ಪ್ರಶ್ನೆಯ ಬಗ್ಗೆ ೧೯೮೫ ರಿಂದ ಅವಕಾಶ ಕೊಟ್ಟಿಲ್ಲ.

ಅಧ್ಯಕ್ಷರು.—ಈ ತರಹ ಮಾತನಾಡುವುದು ಸರಿಯಲ್ಲ.

ಶ್ರೀ ಎಸ್. ಬಂಗಾರಪ್ಪ.—ಇದರ ಬಗ್ಗೆ ಒಂದು ದಿನ ಚರ್ಚೆಗೆ ಅವಕಾಶ ಮಾಡಿ ಕೊಡಿ, ವಿವರವಾಗಿ ಚರ್ಚೆ ಮಾಡೋಣ.

ಅಧ್ಯಕ್ಷರು.—ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ.

ಹಂಗಾಮಿ ನೌಕರರನ್ನು ಖಾಯಂ ಮಾಡುವ ಬಗ್ಗೆ

೧೯೬. ಶ್ರೀ ಚಿಕ್ಕಬೋರಯ್ಯ (ಚಾಮರಾಜನಗರ).—ಮಾನ್ಯ ರೇಷ್ಮೆ ಖಾತೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರದಲ್ಲಿ ಅನೇಕ ವರ್ಷಗಳಿಂದಲೂ ಹಂಗಾಮಿ ಕೆಲಸಗಾರರಾಗಿ ಕೆಲಸ ಮಾಡುತ್ತಿರುವವರನ್ನು ಖಾಯಂ ಮಾಡಲು ನಿರ್ಧಾರವಾಗಿದೆಯೆ ?

ಆ) ಹಾಗಿದ್ದಲ್ಲಿ ಮೈಸೂರು ರೇಷ್ಮೆ ಇಲಾಖೆಯಲ್ಲಿ ಹಂಗಾಮಿಯಾಗಿ ನೌಕರಿಯಲ್ಲಿರುವ ಎಲ್ಲರನ್ನೂ ಖಾಯಂ ಮಾಡಲಾಗಿದೆಯೇ ?

ಇ) ಹಾಗಿಲ್ಲದಿದ್ದಲ್ಲಿ ಖಾಯಂ ಮಾಡಲು ಇರುವ ಅಡ್ಡಿ ಆತಂಕಗಳೇನು ? ಅದಷ್ಟು ಬೇಗನೆ ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳುತ್ತದೆಯೆ ?

ಶ್ರೀ ಕೆ. ಎಂ. ಮುನಿಯಪ್ಪ (ರೇಷ್ಮೆ ಖಾತೆ ಸಚಿವರು).—

ಅ) ಹೌದು. ಪೆನ್‌ಷನ್ ರಹಿತ ಮಾಸಿಕ ವೇತನದ ಮೇಲೆ ಖಾಯಂ ಕೆಲಸಗಾರರನ್ನಾಗಿ ಮುಂದುವರೆಸಲು ನಿರ್ಧಾರವಾಗಿದೆ.

ಆ) ರೇಷ್ಮೆ ಇಲಾಖೆಯ ಎಲ್ಲಾ ದಿನಗೂಲಿ ನೌಕರರನ್ನು ಖಾಯಂ ಮಾಡಿರುವುದಿಲ್ಲ. ಈವರೆವಿಗೆ ೨೩೨೯ ದಿನಗೂಲಿ ಕೆಲಸಗಾರರನ್ನು ಪೆನ್‌ಷನ್ ರಹಿತ ಮಾಸಿಕ ವೇತನದ ಮೇಲೆ ಖಾಯಂ ಕೆಲಸಗಾರರನ್ನಾಗಿ ಮಾಡಲಾಗಿದೆ. ಅದರಲ್ಲಿ ಮೈಸೂರು ಜಿಲ್ಲೆಯು ಸೇರಿದೆ.

ಇ) ಅಡ್ಡಿ ಆತಂಕಗಳು ಇರುವುದಿಲ್ಲ. ಸಚಿವ ಸಂಪುಟದ ಉಪಸಮಿತಿ ತೀರ್ಮಾನದಂತೆ ೫ ವರ್ಷ ಸೇವೆ ಸಲ್ಲಿಸಿದ ನಂತರ, ಮಾಸಿಕ ವೇತನದ ಖಾಯಂ ಕೆಲಸಗಾರರನ್ನಾಗಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.